

# ತಬಲಾ ಆಲಯ; ಮೃದಂಗ ಲಯ

**ತಬಲಾ–ಮೃದಂಗ ತಯಾರಿಕೆಯಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ತೊಡಗಿಸಿಕೊಂಡಿರುವ ಬೆಂಗಳೂರಿನ ಬಳೇಪೇಟೆಯಲ್ಲಿರುವ ಶ್ರೀನಿವಾಸ್‌ ಮೃದಂಗವನ್ನು ಮೂರು ಭಾಗವಾಗಿ ಬೇರ್ಪಡಿಸುವ ವಾದ್ಯವನ್ನು ಹೊಸದಾಗಿ ಆವಿಷ್ಕರಿಸಿದ್ದಾರೆ.**

■ ಉಮಾ ಅನಂತ್

‘ಸೊಗಸುಗಾ... ಮೃದಂಗ ತಾಳಮು...’ ಎಂದರು ಕರ್ನಾಟಕ ಶಾಸ್ತ್ರೀಯ ಸಂಗೀತ ತ್ರಿಮೂರ್ತಿಗಳಲ್ಲಿ ಒಬ್ಬರಾದ ಸಂತ ತ್ಯಾಗರಾಜರು. ಅವನದ್ಧ ವಾದ್ಯಗಳಾದ ಮೃದಂಗವೇ ಇರಲಿ, ತಬಲಾ, ಡೋಲಕ್‌ಗಳೇ ಇರಲಿ. ಲಯ, ನಾದದ ಸೊಬಗು ಕೇಳುಗರಿಗೆ ಅನನ್ಯ ಅನುಭವ ನೀಡುವುದಂತೂ ನಿಜ.

ಮೃದಂಗ ನುಡಿಸಾಣಿಕೆ, ತಯಾರಿಕೆ ಎರಡರಲ್ಲೂ ವಿಶಿಷ್ಟ ಛಾಪು ಮೂಡಿಸಿದವರು ಬೆಂಗಳೂರಿನ ಬಳೇಪೇಟೆಯಲ್ಲಿರುವ ‘ಶಾಂತ ತಬಲಾ ವರ್ಕ್ಸ್‌’ನ ಮಾಲೀಕ ಶ್ರೀನಿವಾಸ್ ಅನಂತರಾಮಯ್ಯ ಅವರು. ವೃತ್ತಿಯಲ್ಲಿ ತಬಲಾ, ಮೃದಂಗ, ಡೋಲಕ್, ಖಂಜೀರಾ ತಯಾರಕರಾದ ಶ್ರೀನಿವಾಸ್, ಪ್ರವೃತ್ತಿಯಲ್ಲಿ ಉತ್ತಮ ಮೃದಂಗ ವಾದಕರು.

ಸುಮಾರು ಐವತ್ತು ವರ್ಷಗಳಿಂದ ಇದೇ ಕಾಯಕದಲ್ಲಿ ತೊಡಗಿರುವ ಇವರು ಬಿಕಾಂ ಪದವೀಧರರು. ತಂದೆ ಅನಂತರಾಮಯ್ಯ ಅವರು ದೊಡ್ಡಬಳ್ಳಾಪುರ ಸಮೀಪದ ದೇವಸ್ಥಾನದಲ್ಲಿ ಅರ್ಚಕರಾಗಿದ್ದರು. ಅವರಿಗೆ ತಬಲಾ, ಮೃದಂಗದ ಮೇಲೆ ಅತೀವ ಆಸಕ್ತಿ ಇತ್ತು. ಈ ವಾದ್ಯಗಳ ನಾದಕ್ಕೆ ಮಾರುಹೋದ ಅವರು, ಭಜನಾ ಮಂಡಳಿಗಳಲ್ಲಿ ಮೃದಂಗ ನುಡಿಸುವುದನ್ನೂ ಅಭ್ಯಾಸ ಮಾಡಿಕೊಂಡಿದ್ದಲ್ಲದೆ ಇದರ ವಿನ್ಯಾಸ ರಚನೆಗೂ ತೊಡಗಿಸಿಕೊಂಡರು.

ಹೀಗಾಗಿ 1950ರಲ್ಲೇ ಬೆಂಗಳೂರಿಗೆ ಹೊಟ್ಟೆಪಾಡಿಗಾಗಿ ಬಂದವರು. ಚಿಕ್ಕಪೇಟೆ ಸಮೀಪದ ಬಳೇಪೇಟೆಯಲ್ಲಿ ‘ಶಾಂತ ತಬಲಾ ವರ್ಕ್ಸ್’ ಸ್ಥಾಪಿಸಿ ಚರ್ಮ ವಾದ್ಯಗಳನ್ನು ತಯಾರಿಸುವ ಕಾಯಕದಲ್ಲಿ ನಿರತರಾದರು. ವಾದ್ಯ ತಯಾರಿಕಾ ವಿಧಾನವನ್ನು ಕಾಟನ್‌ಪೇಟೆಯ ವೆಂಕಟಪ್ಪ ಎಂಬವರ ಬಳಿ ಕಲಿತ ಅನಂತರಾಮಯ್ಯ ಅವರ ಬಳಿಕ ಇವರ ಮಗ ಶ್ರೀನಿವಾಸ್ ಇದೇ ಕಾಯಕ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

## ಹೊಸ ಆವಿಷ್ಕಾರ

ಸಾಮಾನ್ಯವಾಗಿ ಮೃದಂಗವನ್ನು ಇಡಿಯಾಗಿ ತಯಾರಿಸಲಾಗುತ್ತದೆ. ಆದರೆ ಶ್ರೀನಿವಾಸ್ ಅವರ ಹೊಸ ಆವಿಷ್ಕಾರದ ಫಲವಾಗಿ ಮೃದಂಗವನ್ನು ಮೂರು ಭಾಗವಾಗಿ ಬೇರ್ಪಡಿಸಬಹುದು. ಪ್ರಯಾಣ ಮಾಡುವಾಗ ಈ ಹೊಸ ವಿನ್ಯಾಸದ ಮೃದಂಗವನ್ನು ಸುಲಭವಾಗಿ ಒಯ್ಯಬಹುದು.

‘ಇದನ್ನು ಆವಿಷ್ಕಾರ ಮಾಡಿ ಹದಿನೈದು ವರ್ಷಗಳೇ ಕಳೆದಿವೆ. ಈ ಮೃದಂಗವನ್ನು



ಮೂರು ತುಂಡುಗಳಾಗಿ ಮಾಡಿರುವ ಮೃದಂಗ

ಕೊಳ್ಳುವವರ ಸಂಖ್ಯೆ ಕಡಿಮೆ. ಇದಕ್ಕೆ ಕಾರಣ ಈ ಮಾದರಿಯ ಮೃದಂಗದ ಬಗ್ಗೆ ಜನರಿಗೆ ಮಾಹಿತಿಯ ಕೊರತೆ ಇರುವುದೇ ಆಗಿರಬಹುದು. ನಮ್ಮ ಅಂಗಡಿಗೆ ಬರುವವರಿಗೆ ಇದರ ವಿನ್ಯಾಸ, ನಾದ, ಉಪಯೋಗದ ಬಗ್ಗೆ ಮಾಹಿತಿ ನೀಡುತ್ತಿದ್ದೇನೆ’ ಎನ್ನುವ ಅವರು, ನನ್ನ ಈ ಕಾಯಕಕ್ಕೆ ತಾಯಿ 83 ವರ್ಷದ ಅಶ್ವತ್ಥಮ್ಮ ಹಾಗೂ ನನ್ನ ಮಕ್ಕಳ ಸಹಕಾರವೂ ಇದೆ ಎಂದು ಹೇಳುತ್ತಾರೆ.

‘ಚಿಕ್ಕಂದಿನಿಂದಲೂ ಮೃದಂಗದಲ್ಲಿ ಆಸಕ್ತಿ ಇತ್ತು, ಹೀಗಾಗಿ ನನ್ನ ಎಂಟನೇ ವಯಸ್ಸಿಗೇ ಮೃದಂಗ ಕಲಿಕೆಯನ್ನು ವಿದ್ವಾನ್ ವಾಸುದೇವ ರಾವ್ ಅವರ ಬಳಿ ಕಲಿತೆ. ಸತತ ಅಭ್ಯಾಸ ಮಾಡುತ್ತಿದ್ದ ಕಾರಣ ನುಡಿಸಾಣಿಕೆ ಬೇಗನೆ ಒಲಿಯಿತು. ಹೀಗಾಗಿ ಶಾಸ್ತ್ರೀಯ ಸಂಗೀತಕ್ಕೆ ಮೃದಂಗ ಪಕ್ಕವಾದ್ಯವನ್ನೂ ನುಡಿಸುತ್ತೇನೆ, ಹಲವಾರು ಕಛೇರಿಗಳಲ್ಲಿ ಪಕ್ಕವಾದ್ಯ ಹಾಗೂ ಸೋಲೊ ವಾದ್ಯವಾಗಿ ಮೃದಂಗವನ್ನು ನುಡಿಸಿದ್ದೇನೆ. ನವರಾತ್ರಿ, ಗಣೇಶನ ಹಬ್ಬ, ರಾಮನವಮಿ ದಿನಗಳಲ್ಲಿ ಸಂಗೀತ ಕಛೇರಿಗಳಿಗೆ ಮೃದಂಗ ನುಡಿಸುತ್ತೇನೆ’ ಎಂದು ಹೇಳುತ್ತಾರೆ ಶ್ರೀನಿವಾಸ್.

‘ತಬಲಾ, ಮೃದಂಗ, ಡೋಲಕ್ ತಯಾರಿಕೆಗೆ ಮರ ಹಾಗೂ ಇತರ ಪರಿಕರಗಳು ಮಧ್ಯಪ್ರದೇಶ, ಉತ್ತರ ಪ್ರದೇಶ, ತಮಿಳುನಾಡು ಮುಂತಾದ ಕಡೆಗಳಿಂದ ಬರುತ್ತವೆ. ಇವುಗಳನ್ನು ಬಳಸಿ ನಮಗೆ ಬೇಕಾದ ಆಕಾರ, ವಿನ್ಯಾಸಕ್ಕೆ ತಕ್ಕ ಹಾಗೆ ವಾದ್ಯ ತಯಾರಿಸುತ್ತೇನೆ’ ಎನ್ನುತ್ತಾರೆ ಶ್ರೀನಿವಾಸ್.

ಕರ್ನಾಟಕ ಸರ್ಕಾರದ ಪಠ್ಯಕ್ರಮದಡಿ ಹಿಂದೂಸ್ತಾನಿ ಸಂಗೀತದ ತಬಲಾ ಪುಸ್ತಕಕ್ಕೆ ತಬಲಾ ತಯಾರಿಕೆ ಬಗ್ಗೆ ಚಿತ್ರ ಸಹಿತ ಒಂದು ಅಧ್ಯಾಯವನ್ನು ಬರೆದುಕೊಟ್ಟಿರುವುದು ಇವರ ಹೆಚ್ಚುಗಾರಿಕೆ ಎನ್ನಬಹುದು. ಬೆಂಗಳೂರಿನ ತ್ಯಾಗರಾಜ ಗಾನಕಲಾ ಟ್ರಸ್ಟ್ ಇವರನ್ನು ‘ಲಯವಾದ್ಯ ಕಲಾಭೂಷಣ’ ಪ್ರಶಸ್ತಿ ನೀಡಿ ಗೌರವಿಸಿದೆ.

ಪ್ರತಿಕ್ರಿಯಿಸಿ: feedback@sudha.co.in